ದಿಃ21.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

**ಪಾಟಿ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಅಪಘಾತವಾದ 3 ದಿನಗಳ ನಂತರದಲ್ಲಿ ಎಫ್.ಐ.ಆರ್ ಪ್ರತಿಯನ್ನು ಪಡೆದುಕೂಂಡಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ನನಗೆ ಇನ್ಸುರೆನ್ಸ್ ಕ್ಲೇಮ ಮಾಡಬಹುದು ಎಂದು ತಿಳಿಸಿದ್ದರು. ಆ ಸಮಯದಲ್ಲಿ ನನ್ನ ಬುಲ್ಯಾರೋ ಜೀಪನ್ನು ರಿಪೇರಿ ಮಾಡಿಸುವ ಸಲುವಾಗಿ 97,000/- ರೂ ಗಳನ್ನು ಖರ್ಚು ಮಾಡಿರುತ್ತೇನೆ. 3 ನೇ ಎದುರುದಾರರ ಕಂಪನಿಂದ ನನಗೆ 48,500/- ರೂ ಬಂದಿರುತ್ತದೆ. ಉಳಿದ ಮೊತ್ತಕ್ಕೆ ಸಂಬಂಧಿಸಿದಂತೆ ಕಾರನ್ನು ವಿಮೆ ಮಾಡಿದ ಕಂಪನಿಂದ ತೆಗೆದುಕೂಳ್ಳಬೇಕು ಎಂದು ತಿಳಿಸಿದ್ದರು. ಆ ರೀತಿಯಾಗಿ 3 ನೇ ಎದುರುದಾರರು ನನಗೆ 48,500/- ಗಳನ್ನು ಪಡೆದುಕೊಂಡ ನಂತರದಲ್ಲಿ ತಿಳಿಸಿರುತ್ತಾರೆ. ಅಪಘಾತವಾದ 65 ದಿನಗಳ ನಂತರದಲ್ಲಿ ನಾನು 48,500/- ರೂ ಇನ್ಸುರೆನ್ಸ್ ನ್ನು ಪಡೆದುಕೂಂಡಿರುತ್ತೇನೆ. ನಂತದರಲ್ಲಿ ನಾನು ನ್ಯಾಯಾಲಯಕ್ಕೆ ಈ ಅರ್ಜಿಯನ್ನು ದಾಖಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಅರ್ಜಿಯನ್ನು ಯಾವುದೇ ಸಕಾರಣ ಇಲ್ಲದೇ ಅವಧಿ ಮುಗಿದ ನಂತರದರಲ್ಲಿ ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್. ಬಿ. ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.